**ಮಧ್ಯಂತರ ಅರ್ಜಿ 12 ರಿಂದ 14 ರ ಮೇಲಿನ ಆದೇಶದಂತೆ ದಿನಾಂಕಃ09.01.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ : ವಾದಿಯ ಪರ ವಕೀಲರಿಂದಃ**

9. ದೃಢೀಕೃತ ಪಾಲುವಿಭಾಗ ಪತ್ರವನ್ನು ನಿಪಿ **12** ಎಂದು ಗುರುತಿಸಿತು.

**ಪಾಟೀ ಸವಾಲು : 2 ನೇ ಪ್ರತಿವಾದಿಯ ಪರ ವಕೀಲರಿಂದಃ**

10. ನಿಪಿ 12 ರ ಪಾಲುವಿಭಾಗ ಪತ್ರವು ದಾವೆ ಸಲ್ಲಿಸುವ 4 ವರ್ಷಕ್ಕಿಂತ ಮುಂಚೆಯೇ ನನ್ನ ವಶದಲ್ಲಿತ್ತು ಎಂದರೆ ಸರಿಯಲ್ಲ. ಅದನ್ನು ವಾದ ಪತ್ರ ಸಲ್ಲಿಸುವಾಗಲಾಗಲೀ ಅಥವಾ ನನ್ನ ಮುಖ್ಯವಿಚಾರಣೆ ಮಾಡುವಾಗಲಾಗಲೀ ಹಾಜರು ಮಾಡದೇ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಈಗ ಹಾಜರು ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಗೆ ಸದರಿ ಪಾಲುವಿಭಾಗ ಪತ್ರವು ಯಾವುದೇ ರೀತಿಯಲ್ಲಿ ಸಮಂಜಸವಲ್ಲದಿದ್ದರೂ ಅದನ್ನು ಹಾಜರು ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : 1 ನೇ ಪ್ರತಿವಾದಿಯ ಪರ ವಕೀಲರು ಇದೇ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿದ್ದಾರೆ.**

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಹೂವಿನ ಹಡಗಲಿ.**